ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Saturday, the 15th April 1972

The House met in the Assembly Chamber, Vidhana Soudha, at Nine of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which oral answers were given)

Bovipalyakere in Anekal Taluk

13. **Sri M. B. RAMASWAMY** (Anekal).—

Will the Minister for Public Works be pleased to state :—

(*a*) whether plans and estimates had been prepared for Bovipalyakere (Chikkanagamangala) in Sarjapur Hobli, Anekal Taluk;

(*b*) if so, the estimated cost of the said tank ;

(*c*) the extent of land coming under its atchkat ;

(*d*) whether it is not a fact that tenders were invited for construction of this tank ;

(*e*) if so, the date that was fixed for receiving the tenders ?

Sri H. M. CHANNABASAPPA (Minister for Public Works).—

(*a*) Yes.

(*b*) Rs. 35,500

(*c*) 24 Acres.

(*d*) Yes ; tenders were invited.

(*e*) 20th April 1966.

ಶ್ರೀ ಎಂ. ಬಿ. ರಾಮುಸ್ವಾಮಿ.—20-4-1966 ರೊಳಗಾಗಿ ಟೆಂಡರುಗಳನ್ನು ಹಾಕಬೇಕು ಎಂದು ಕೇಳಿದ್ದರೂ ಸಹ ಇದುವರೆಗೂ ಕೆಲಸಗಳನ್ನು ತೆಗೆದುಕೊಳ್ಳದೆ ಇರುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಟೆಂಡರುಗಳನ್ನು ಕರೆದಿದ್ದು ನಿಜ. ಅದನ್ನು ರಿಪೋರ್ಟ್ ಮಾಡಿದ್ದೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಟೆಂಡರುಗಳನ್ನು ಯಾರು ಯಾರು ಹಾಕಿದ್ದರು ಎಂದು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಟೆಂಡರ್ ನೋಟಿಫಿಕೇಷನ್ ಹೊರಡಿಸಿದ ಮೇಲೆ ಕೂಡಲೇ ಟೆಂಡರ್ ನೋಟಿಫಿಕೇಷನ್ ರದ್ದು ಮಾಡಿದ್ದೇವೆಂದು ಹೇಳಿದ್ದೇನೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.— ಸಣ್ಣಪುಟ್ಟ ನೀರಾವರಿ ಕೆಲಸಗಳನ್ನು ಹೆಚ್ಚು ಹೆಚ್ಚಾಗಿ ಈ ರಾಜ್ಯದಲ್ಲಿ ಮಾಡಬೇಕು ಎನ್ನುವ ನೀತಿಯನ್ನು ಇಟ್ಟುಕೊಂಡಿರತಕ್ಕ ಸರ್ಕಾರದಲ್ಲಿ, 1966ನೇ ಇಸವಿಯಲ್ಲಿ ಟೆಂಡರ್ ಕರೆದಿದ್ದರೂ, 1972 ನೇ ಇಸವಿಯಾದರೂ ಕೆಲಸ ಮಾಡದೆ ಇರುವುದಕ್ಕೆ ಕಾರಣವೇನು ? ಹಣದ ಅಭಾವವೋ ಅಥವಾ ರಾಜಕೀಯ ಒತ್ತಡವೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಕೆಲಸವನ್ನು ಮಾಡಕೂಡದೆಂದು ಹುಕುಂ ಮಾಡಿದೆ.

ಶ್ರೀ ಜಿ. ರಾಮೇಗೌಡ.—ಈ ಕೆಲಸವನ್ನು ಮಾಡಕೂಡದೆಂದು ಹುಕುಂ ಹೊರಡಿಸಲು ಮುಖ್ಯವಾಗಿ ಗಮನಕ್ಕೆ ತಂದ ಅಂಶಗಳೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ಅನ್‌ಸೌಂಡ್ ಎನ್ನುವ ತೀರ್ಮಾನಕ್ಕೆ ಬಂದಮೇಲೆ ಹುಕುಂ ಮಾಡಲಾಗಿದೆ.

ಶ್ರೀ ಬಿ. ಬೈರಪ್ಪಾಜಿ.—ಟೆಕ್ನಿಕಲ್, ಫೈನಾನ್‌ಷಿಯಲ್ ಅನ್‌ಫೀಸಿಬಲ್ ಎಂದು ಹೇಳಿದ್ದಾರೆ. ಒಂದು ಎಕರೆಗೆ ಇಷ್ಟು ಸಾವಿರ ರೂಪಾಯಿ ಖರ್ಚು ಮಾಡಿದರೆ ಅದರಿಂದ ಉತ್ಪತ್ತಿ ಇಷ್ಟು ಬಂದರೆ ಸಾಕು, ಕೆರೆ ಕಟ್ಟಿಸಬೇಕು ಎನ್ನುವ ಒಂದು ಲೆಕ್ಕಾಚಾರ ಸರ್ಕಾರದಲ್ಲಿದೆ. ಆ ಒಂದು ಮಿತಿಯನ್ನು ಮೀರಿ ಅಂದಾಜುಗಳು ತಯಾರಾದುವೋ ಅಥವಾ ರಾಜಕೀಯ ಒತ್ತಡ ಅಥವಾ ಪ್ರಭಾವದಿಂದ ಈ ಕಾಮಗಾರಿಯನ್ನು ನಿಲ್ಲಿಸಲಾಗಿದೆಯೋ ಎನ್ನುವುದನ್ನು ತಿಳಿಸುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ಎಕರೆಗೆ ನಿರ್ದಿಷ್ಟವಾದ ಖರ್ಚಿನ ಮಿತಿಯೇನಿದೆ ಅದರ ಮೇಲೆ ಖರ್ಚು ಬಂದರೆ ಆಗ ಕಟ್ಟ ಕೂಡದು ಎನ್ನುವ ವಿಧಿ ಇದೆ. ಆದಕ್ಕೆ ಇದು ವಿರೋಧವಾಗಿದೆ. ಅದಕ್ಕಿಂತಲೂ ಬಹಳ ಮುಖ್ಯವಾಗಿ ಅಲ್ಲಿ ಸಾಕಷ್ಟು ನೀರು ಆ ಕೆರೆಗೆ ಒದಗುವುದಿಲ್ಲ ಎನ್ನುವುದು ಖಚಿತವಾದ ಮೇಲೆ ಅದನ್ನು ನಿಲ್ಲಿಸಿದ್ದೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಸಂಸ್ಥಾ ಕಾಂಗ್ರೆಸ್ ಪ್ರಭಾವದಿಂದ ಹೀಗಾಗಿದೆ, ಅದನ್ನು ಸರಿಪಡಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲಿ ಪಕ್ಷಗಳ ಪ್ರಶ್ನೆ ಇಲ್ಲ. ನೀರು ಇದೆಯೇ, ಇಲ್ಲವೇ ಎನ್ನುವುದು ಪ್ರಶ್ನೆ ಮತ್ತು ಆರ್ಥಿಕವಾಗಿ, ತಾಂತ್ರಿಕವಾಗಿ ಸೌಂಡ್ ಆಗಿದೆಯೇ ಎನ್ನುವುದು ಪ್ರಶ್ನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈ ಕೆಲಸವನ್ನು ಕೈ ಬಿಡಲಾಗಿದೆ ಎನ್ನುವ ರೀತಿಯಲ್ಲಿ ಉತ್ತರ ಹೇಳಿದರು. ಟೆಂಡರ್ ಕರೆಯುವುದಕ್ಕೆ ಮೊದಲು ರೋಕೋಪಯೋಗಿ ಇರಾಖೆಯಲ್ಲಿ ಅದು ಫೀಸಿಬಲ್ ಆಗಿದೆಯೇ ಇಲ್ಲವೇ ಎನ್ನುವ ವಿಚಾರ ಪರಿಶೀಲನೆ ಮಾಡಲಿಲ್ಲವೇ ? ಪರಿಶೀಲನೆ ಮಾಡದೆ ಕಣ್ಣುಮುಚ್ಚಿಕೊಂಡು ಟೆಂಡರ್ ಕರೆದರೇ ? ಆ ರೀತಿ ಬೇಜವಾಬ್ದಾರಿಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ವಿಷಯ ಪರ್ಯಾಲೋಚನೆಯಲ್ಲಿದೆ. ಎಲ್ಲ ತಪ್ಪು ಆಗಿದೆ ಎನ್ನುವುದನ್ನು ನೋಡಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕೆಂಬ ಯೋಚನೆಯೂ ಇದೆ.

ಶ್ರೀ ಎಚ್. ಡಿ. ದೇವೇಗೌಡ.—24 ಎಕರೆಗೆ 35,500 ರೂಪಾಯಿ ಖರ್ಚಾಗುತ್ತದೆ ಎಂದು ಹೇಳಿದ್ದಾರೆ. ಆರಿಡ್ ಜೋನ್‌ನಲ್ಲಿ 1500 ರೂಪಾಯಿಗಳವರೆಗೂ ಖರ್ಚು ಮಾಡಬಹುದು ಎಂದು ಇದೆ. ಆ ಪ್ರಕಾರ ಈ ಪ್ರಾಜೆಕ್ಟ್‌ಗೆ 36 ಸಾವಿರ ರೂಪಾಯಿಗಳವರೆಗೂ ಹಣ ವೆಚ್ಚಮಾಡುವುದಕ್ಕೆ ಅವಕಾಶವಿದೆ. ಫೈನಾನ್‌ಷಿಯಲ್ ಫೀಸಿಬಲ್ ಎನ್ನುವ ದೃಷ್ಟಿಯಿಂದ ಇದನ್ನು ಮಾಡಿನುವುದು ಸರಿಯಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಫೈನಾನ್‌ಷಿಯರ್ ಅಂಡ್ ಟೆಕ್ನಿಕರ್ ಫೀಸಿಬಲ್ ಎಂದು ನಾನು ಹೇಳಿದೆ. ಒಂದು ವೇಳೆ ಫೈನಾನ್‌ಷಿಯಲ್ ಫಿಸಿಬಲ್ ಅಲ್ಲದೆ ಸ್ವಲ್ಪ ಹೆಚ್ಚು ಕಡಿಮೆ ಯಾದರೂ ಅಡ್ಡಿ ಇಲ್ಲ. ಟೆಕ್ನಿಕರ್ ಫೀಸಿಬಲ್‌ಟಿಯಲ್ಲಿ ದೋಷದೋಷವಿದ್ದರೆ, ಅದನ್ನು ಮಾಡತಕ್ಕದು ಸರಿಯಲ್ಲ ಎನ್ನುವುದನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳಬೇಕು.

ಶ್ರೀ ಎಚ್. ಎಸ್. ಸಿದ್ದಪ್ಪ.—ಪಬ್ಲಿಕ್ ವರ್ಕ್ಸ್ ಇರಾಖೆಯಲ್ಲಿ ಈ ತರಹ ಟೆಂಡರ್ ಕರೆದು, ರದ್ದಾಗಿರತಕ್ಕ ನಿದರ್ಶನಗಳಿವೆಯೇ !

ಶ್ರೀ ಎಚ್. ಎಂ. ಚನ್ನಬಸಪ್ಪ.—ರದ್ದಾಗಿರತಕ್ಕ ನಿದರ್ಶನಗಳಿರಬಹುದು. ತಕ್ಷಣದಲ್ಲಿ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ಮಲ್ಲಪ್ಪ.—ಚೆಕ್ಕಿಕಲಿ ಅನ್‌ಸೌಂಡ್ ಇದ್ದರೆ ಅಂಥ ಕೆಲಸಗಳನ್ನು ಮಾಡುವುದು ಸರಿಯಲ್ಲ ಎಂದು ಅಪ್ಪಣೆ ಕೊಡಿಸಿದರು. ಚೆಕ್ಕಿಕಲಿ ಅನ್‌ಸೌಂಡ್ ಆಗಿರತಕ್ಕ ಕೆಲಸಗಳನ್ನು ಮಾಡಿಸಿ ಅದರಿಂದ ರೈತರಿಗೆ ಅನುಕೂಲವಾಗದೆ ಇರತಕ್ಕ ನಿದರ್ಶನಗಳನ್ನು ತಮ್ಮ ಗಮನಕ್ಕೆ ತಂದರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ಸ್ವಾಮಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನಾಗಲೇ ಹೇಳಿದೆ. ತಾಂತ್ರಿಕವಾಗಿ ಒಪ್ಪಿಗೆಯಾಗದೆ ಇರತಕ್ಕವನ್ನು ಸಲಹೆ ಮಾಡಿ ಕಾರ್ಯ ಮುಂದುವರಿದಿದ್ದರೆ, ಯಾರು ತಾಂತ್ರಿಕವಾಗಿ ತಪ್ಪು ಸಲಹೆಯನ್ನು ಕೊಟ್ಟಿದ್ದಾರೆ ಅಂಥವರ ಮೇಲೆ ಸೂಕ್ತವಾದ ಕ್ರಮ ತೆಗೆದುಕೊಂಡು ಶಿಕ್ಷೆ ಮಾಡುವುದಕ್ಕೆ ಸರ್ಕಾರ ಹಿಂಜರಿಯುವುದಿಲ್ಲವೆಂದು ಮಾತ್ರ ಹೇಳುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ನಂ. 108 ಮತ್ತು 113, ಈ ಎರಡು ಪ್ರಶ್ನೆಗಳು ಒಂದೇ ವಿಷಯಕ್ಕೆ ಸಂಬಂಧಪಟ್ಟ ಪ್ರಶ್ನೆಗಳಾಗಿರುವುದರಿಂದ ಎರಡನ್ನು ಒಟ್ಟಿಗೆ ಹಾಕಬಹುದು.

Unemployment in the State

108. **Sri T. R. SHAMANNA** (Fort).—

Will the Minister for Labour be pleased to state :—

(*a*) the number of unemployed persons of the following categories :—

(i) Technical—B. E., Diplomas, Medical etc.,

(ii) Other educated unemployed,

(iii) Uneducated—skilled and unskilled ;

(*b*) the steps taken by the Government to solve the unemployment problem ?

Sri AZEEZ SAIT (Minister for Labour).—

(*a*) The figures, as on 29-2-1972 of the number of educated unemployed persons in different categories were as below :

(i) Engineering graduates – 2,765
Diploma holders 6,585
Graduates in Medicine 380
Graduates in Agriculture 216
Graduates in Veterinary 25

(ii) Other educated unemployed 1,43,498

(iii) Detailed breakup regarding all categories of skilled persons is not available.

However, total number of certificate holders (I. T. I. Apprenticeship, etc.) 3,665

Total Number of uneducated persons (including illiterates) 1,21,113.